# ಸೀರೆಯಲ್ಲೂ ಫ್ಯೂಷನ್

ಫ್ಯೂಷನ್ ಸೀರೆ ಹೊಸ ಟ್ರೆಂಡ್ ಆಗಿಬಿಟ್ಟಿದೆ. ರೇಷ್ಮೆ ಸೀರೆಯನ್ನೇ ಫ್ಯೂಷನ್ ಶೈಲಿಯಲ್ಲಿ ಉಟ್ಟು ಸಾಂಪ್ರದಾಯಿಕತೆಗೆ ಆಧುನಿಕ ಟಚ್ ನೀಡುವಲ್ಲಿ ಫ್ಯಾಷನ್ ಜಗತ್ತು ದಾಪುಗಾಲು ಹಾಕಿದ್ದು, ಯುವತಿಯರು ಫುಲ್ ಖುಷ್ ಆಗಿದ್ದಾರೆ. ಹಬ್ಬದ ಸಂದರ್ಭದಲ್ಲಿ ಸಖತ್ ಆಗಿ ಮಿಂಚಲು ಸಿದ್ಧತೆ ನಡೆಸುತ್ತಿದ್ದಾರೆ.

■ ಯು. ವೇಣೂರು



ಫ್ಯೂಷನ್ ಸಂಗೀತ ಕೇಳಿದ್ದೇವೆ. ಉಡುಪಿನಲ್ಲಿ ಫ್ಯೂಷನ್ ಮಾದರಿಯೂ ಹೊಸದಲ್ಲ. ಆದರೆ ಸಾಂಪ್ರದಾಯಿಕ ಸೀರೆಯಲ್ಲಿ? ಇದೀಗ ಸೀರೆಯಲ್ಲೂ ಫ್ಯೂಷನ್ ವೈವಿಧ್ಯ ಬಂದಿದೆ. ಹಬ್ಬದ ಸಂದರ್ಭದಲ್ಲಿ ಸಾಂಪ್ರದಾಯಿಕತೆಯೊಂದಿಗೆ ಆಧುನಿಕ ಸ್ಪರ್ಶ ತಳುಕು ಹಾಕಿಕೊಂಡಿದೆ.

ಫ್ಯಾಷನ್ ಎಂದರೆ ಟ್ರೆಂಡ್, ಹೊಸತನ ಎಂದೂ ವ್ಯಾಖ್ಯಾನಿಸಬಹುದು. ಕೆಲವರಿಗೆ ಇದೊಂದು ಕ್ರೇಜ್. ಇನ್ನು ಕೆಲವರಿಗೆ ಗ್ಲ್ಯಾಮರಸ್ ಲುಕ್ ಪಡೆಯುವ ತವಕ. ಹೀಗಾಗಿ ಸೀರೆಯಲ್ಲೂ ಹೊಸ ಲುಕ್ ಹೊಂದಬೇಕೆಂಬ ತುಡಿತ. ಇದೀಗ ಡ್ರೆಸ್, ಜ್ಯುವೆಲ್ಲರಿ, ಆ್ಯಕ್ಸೆಸರಿ, ಚಪ್ಪಲಿ.. ಎಲ್ಲ ಕ್ಷೇತ್ರಗಳಲ್ಲೂ ಫ್ಯೂಷನ್‌ನದ್ದೇ ಹೊಳಪು. ಮಾಡೆಲಿಂಗ್ ತಾರೆಯರು ರ‍್ಯಾಂಪ್ ಮೇಲೆ ತೊಟ್ಟ ಉಡುಪು, ನಟಿಯರು ತೆರೆಯ ಮೇಲೆ ಮೆರೆದ ಒಡವೆ, ಮದುಮಗಳು ಉಟ್ಟ ಸೀರೆ... ಎಲ್ಲವೂ ಫ್ಯಾಷನ್‌ನ ಉಗಮಸ್ಥಾನ ಎನ್ನಬಹುದು. ಇದೀಗ ಹೊಸ ಸೇರ್ಪಡೆ ಎಂದರೆ ಫ್ಯೂಷನ್ ಸೀರೆ.

ಫ್ಯಾಷನ್ ಜಗತ್ತಿನಲ್ಲಿ ಗ್ಲ್ಯಾಮರ್‌ಗೆ ಅಗ್ರಮಣೆ. ಹೊಸತನಕ್ಕೆ, ಫ್ಯಾಷನಬಲ್ ಲುಕ್‌ಗೆ ಪ್ರಥಮ ಪ್ರಾಶಸ್ತ್ಯ. ಹಳೆಯ ಫ್ಯಾಷನ್‌ಗೆ ಹೊಸ ರೂಪ. ಹೀಗಾಗಿ ಫ್ಯಾಷನ್ ಸದಾ ಜೀವಂತ. ತೆರೆಮರೆಗೆ ಸರಿದಿದ್ದ ಫ್ಯಾಷನ್ ಮತ್ತೆ ಹೊಸ ರೂಪ, ಹೊಸ ಜೀವ, ಹೊಸ ವಿನ್ಯಾಸದೊಂದಿಗೆ ಬರುತ್ತಲೇ ಇದೆ. ಇದೇ ಸರಣಿಗೆ ಫ್ಯೂಷನ್ ಸೀರೆಯೂ ಸೇರಿಕೊಂಡು ಫ್ಯಾಷನ್ ಜಗತ್ತಿನಲ್ಲಿ ಸಖತ್ ಆಗಿ ಸುದ್ದಿ ಮಾಡುತ್ತಿದೆ.

'ಮೊದಲೆಲ್ಲಾ ಆಧುನಿಕ ಮನೋಭಾವದ ಯುವತಿಯರು ಸೀರೆ ಉಡಲು ಅಷ್ಟಾಗಿ ಇಷ್ಟಪಡುತ್ತಿರಲಿಲ್ಲ. ಆದರೆ ಇದೀಗ ಫ್ಯೂಷನ್ ಸೀರೆಯೇ ಫ್ಯಾಷನ್ ಆಗಿದೆ. ಮಹಿಳೆಯರ ದೇಹಕ್ಕೆ ತಕ್ಕಂತೆ ಹಲವು ಶೈಲಿಗಳು ಸೀರೆ ಉಡಲು ಪ್ರೇರೇಪಿಸುತ್ತಿವೆ. ಯಾವುದೇ ಬೇರೆ ದಿರಿಸಿಗಿಂತ ಫ್ಯೂಷನ್ ಸೀರೆ ಹೆಚ್ಚು ಫ್ಯಾಷನಬಲ್ ಆಗಿ ಕಾಣುತ್ತದೆ' ಎಂದು ಹೇಳುತ್ತಾರೆ ಬೆಂಗಳೂರಿನ ಜಯನಗರದಲ್ಲಿರುವ ಫ್ಯಾಷನ್ ತಜ್ಞೆ ಸುಮತಿ ಬಿ. ಶೆಟ್ಟಿ.

'ಮೊದಲು ದಕ್ಷಿಣ ಭಾರತ ಶೈಲಿಯಲ್ಲಿಯೇ ಹಲವು ರೀತಿಯಲ್ಲಿ ಸೀರೆ ಉಡುವುದು ರೂಢಿಯಲ್ಲಿತ್ತು. ಈಗ ಸಾಂಪ್ರದಾಯಿಕವಾಗಿ ಮಾತ್ರವಲ್ಲ, ಸ್ಟೈಲಿಷ್ ಆಗಿ ಕೂಡ ಕಾಣಬೇಕೆಂದು ಎಲ್ಲರೂ ಬಯಸುವ ಕಾರಣ ಫ್ಯೂಷನ್ ಸೀರೆಗಳು ಇಂಡೊ ವೆಸ್ಟರ್ನ್ ಶೈಲಿಯಲ್ಲೂ ಬಂದಿವೆ. ಸೀರೆ ಅಂದ ಕಾಣುವುದರ ಜೊತೆಗೆ ತೊಟ್ಟುಕೊಂಡು ಓಡಾಡಲು ಕಷ್ಟವಾಗದಂತಿರಬೇಕು, ಜೊತೆಗೆ ಸೀರೆ ಉಡುವುದು 'ಓಲ್ಡ್ ಫ್ಯಾಷನ್' ಎನ್ನುತ್ತಿದ್ದವರು ಕೂಡ ಈಗ ಫ್ಯೂಷನ್ ಸೀರೆಯ ಫ್ಯಾಷನ್‌ಗೆ ಮಾರು ಹೋಗುತ್ತಿದ್ದಾರೆ. ಇದರಲ್ಲಿನ ಥರಾವರಿ ಶೈಲಿಗಳಿಗೆ ಮನಸೋತಿದ್ದಾರೆ. ಸೀರೆಯಲ್ಲೇ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಂಡು ಫ್ಯಾಷನ್ ಮೆರೆಯುತ್ತಿದ್ದಾರೆ. ಫ್ಯೂಷನ್ ಶೈಲಿಯಲ್ಲಿ ಬಿಂದಾಸ್ ಆಗಿ ಓಡಾಡುತ್ತಿದ್ದಾರೆ' ಎನ್ನುತ್ತಾರೆ ಸುಮತಿ.

### ಟ್ರೈಬಲ್ ದಿರಿಸು ಟ್ರೆಂಡ್

ಟ್ರೈಬಲ್ ದಿರಿಸಿನಲ್ಲಿಯೂ ಫ್ಯೂಷನ್ ಚಾಲ್ತಿಯಲ್ಲಿದೆ. ಗಾಢ ಬಣ್ಣದ, ದೊಡ್ಡ ದೊಡ್ಡ ಚಿತ್ರಗಳು ಟ್ರೈಬಲ್ ಉಡುಪಿನಲ್ಲಿ ಸಾಮಾನ್ಯ. ಇದನ್ನೇ ತಿಳಿ ಬಣ್ಣದ ಬಟ್ಟೆಯ ಮೇಲೆ ಹಾಕಿದರೆ ಅದರ ಅಂದ ಇನ್ನಷ್ಟು ಹೆಚ್ಚುತ್ತದೆ. ಕಲಂಕಾರಿ ಶೈಲಿಯ ಸೀರೆಗಳು, ಕುರ್ತಾಗಳಿಗೆ ಭಾರಿ ಬೇಡಿಕೆ ಇದೆ. ಇನ್ನು ರೇಷ್ಮೆ ಸೀರೆ, ರವಿಕೆಯ ಕೈಯ ಅಂಚಿನ ವಿನ್ಯಾಸ ಕಲಂಕಾರಿ, ವರ್ಲಿಯದ್ದು ಆಗಿರುವುದು ಇನ್ನು ವಿಶೇಷ. ಹಳೆಯ ಕಾಲದ ಕಾಂಜೀವರಂ ಸೀರೆಗೂ, ಅಜ್ಜಿ ಕಾಲದ